**ದೋ.ಸಾ. : 29 ಪ್ರಾ.ಸಾ. : 32**

**ದಿನಾಂಕಃ 04-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

4. ಸದರಿ ಘಟನೆಯು ರಾತ್ರಿ 11-00 ಪೂರ್ವದಲ್ಲಿ ನಡೆದಿರುತ್ತದೆ ಎಂದು ನನಗೆ ತಿಳಿದು ಬಂತು. ಆ ನಂತರ ಜಾನಕಿಯನ್ನು ಕದ್ರಾದ ಕೆ.ಪಿ.ಸಿ ಆಸ್ಪತ್ರೆಯಿಂದ ಕಾರವಾರಕ್ಕೆ ಕರೆದುಕೊಂಡು ಬಂದು, ಆ ನಂತರ ಗೋವಾದ ಬಾಂಬೋಲಿಯಂ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ತಿಳಿದು ಬಂತು. ಸದರಿ ಶವಗಳನ್ನು ನಾನು ನೋಡಿದಾಗ, ಕತ್ತಿಯಿಂದ ಕಡಿದು ಕೊಲೆ

ಮಾಡಲಾಗಿ ಎಂದು ನನಗೆ ಕಂಡುಬಂದಿತು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ನಿಪಿ-3 ಪೋಟೋದಲ್ಲಿ ಮೃತ ವೇಲು ರವರ ಮನೆಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-4, 10, 13 ಪೋಟೋಗಳಲ್ಲಿ ಕಾಣುತ್ತಿರುವ ಅಶ್ವಿನಿಯ ಶವವನ್ನು ನೋಡಿ ಗುರತಿಸಿದ್ದು, ಅದು ಅವರ ಮನೆಯ ಹಾಲ್ ನಲ್ಲಿದೆ ಎಂದು ನುಡಿದಿರುತ್ತಾರೆ. ನಿಪಿ-6 ಮತ್ತು 14 ಪೋಟೋಗಳಲ್ಲಿ ವೇಲುವಿನ ಶವವನ್ನು ನಿಪಿ-7 ಮತ್ತು 15 ರಲ್ಲಿ ಸತ್ಯ ನಾರಾಯಣ ಮೂರ್ತಿಯ ಶವವನ್ನು ನೋಡಿ ಗುರುತಿಸಿದ್ದು, ಅವುಗಳು ಕೊಡಸಳ್ಳಿ ಕಡೆಗೆ ಹೋಗುವ ಅರಣ್ಯ ಕಾಲು ದಾರಿಯಲ್ಲಿರುತ್ತವೆ ಎಂದು ನುಡಿಯುತ್ತಾರೆ. ಅದೇ ರೀತಿ ವೇಲುವಿನ ಶವದ ಪಕ್ಕದಲ್ಲಿ ಬಿದ್ದಿದ್ದ ಊರುಗೋಲುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-13 ಎಂದು ಗುರುತಿಸಲಾಗಿರುತ್ತದೆ.

5. ಪೊಲೀಸರು ಶವ ಬಿದ್ದ ಸ್ಥಳಗಳಲ್ಲಿ ಪೋಟೋಗಳನ್ನು ತೆಗೆದು, ಅಳತೆಯನ್ನು ಮಾಡಿ, ನಂತರ ಮೃತ ವೇಲು, ಸತ್ಯ ನಾರಾಯಣ ಮೂರ್ತಿ ಹಾಗೂ ಅಶ್ವಿನಿಯ ಶವವಗಳನ್ನು ಕಾರವಾರದ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಅದೇ ದಿನ ಅಂದರೆ ದಿಃ 15-02-2014 ರಂದು ಸಂಜೆ ಪೊಲೀಸರು ವೇಲು ರವರ ಮನೆಯ ಬಳಿ ಪಂಚನಾಮೆಗಾಗಿ ಬಂದಾಗ, ನಾನು ಹಾಗೂ ಚಾಸಾ-10 ನಾಗರಾಜ, ಚಾಸಾ-11 ಅಯ್ಯಪ್ಪ ರವರು ಹಾಜರಿದ್ದೆವು. ನಂತರ ಪೊಲೀಸರು ನನ್ನಿಂದ ವೇಲು ರವರ ಮನೆಯ ಬಾಗಿಲನ್ನು ತೆರೆಯಿಸಿ, ನಂತರ ಮನೆಯ ಒಳಗೆ ಹೋಗಿ, ಪರಿಶೀಲಿಸಿದಾಗ, ಬೆಡ್ ರೂಮ್ ನ ಮಂಚದ ಮೇಲೆ ಒಂದು ನೋಕಿಯಾ ಮೊಬೈಲ್ ಇದ್ದು, ಅದಕ್ಕೆ ಎರಡು ಸಿಮ್ ಗಳು ಇದ್ದು, ಅದು ಚಾಲು ಸ್ಥಿತಿಯಲ್ಲಿತ್ತು, ಸದರಿ ಬೆಡ್ ರೂಮ್ ನ ಸೆಲ್ಫ್ ಮೇಲೆ ಎರಡು ನೋಕಿಯಾ ಮೊಬೈಲ್ ಗಳು ಒಂದು ಚೈನಾ ಮೊಬೈಲ್ ಇದ್ದು, ಅವುಗಳು ಚಾಲು ಸ್ಥಿತಿಯಲ್ಲಿದ್ದು, ಅವುಗಳಿಗೆ ಸಿಮ್ ಇರಲಿಲ್ಲ. ಅದೇ ರೂಮ್ ನಲ್ಲಿದ್ದ ಕಪಾಟಿನಲ್ಲಿ ನಗದು ಹಣ ರೂ.4,020/- ಗಳು, ಬಂಗಾರದ ಆಭರಣಗಳಾದ ಒಂದು ಉಂಗುರ, ಅರ್ಧ ಗ್ರಾಮ್ ನಷ್ಟು ತೂಕದ ಒಂದು ಕಿವಿ ಒಲೆ, ಒಂದು ಚಿಕ್ಕ ಮೂಗುತಿ, 4 ಗ್ರಾಮ್ ನಷ್ಟು ತೂಕದ ಎರಡು ಕಿವಿ ಒಲೆ, 1 ಗ್ರಾಮ್ ನಷ್ಟು ತೂಕದ ಕಿವಿ ಒಲೆಯ ಎರಡು ಪಿರಕಿಗಳು, 40 ಗ್ರಾಮ್ ನಷ್ಟು ತೂಕದ ಒಂದು ಜೊತೆ ಬೆಳ್ಳಿ ಕಾಲ ಚೈನ್, 10 ಗ್ರಾಮ್ ನಷ್ಟು ತೂಕದ ಒಂದು ಬೆಳ್ಳಿ ಕಾಲ ಚೈನ್ ಗಳು ಇದ್ದು, ಅಲ್ಲಿ ಪೊಲೀಸರು ಸದರಿ ಹಣ ಹಾಗೂ ಆಭರಣಗಳನ್ನು ನನಗೆ ನೀಡಿದರು ಹಾಗೂ ಮೊಬೈಲ್ ಗಳನ್ನು ಜಪ್ತುಪಡಿಸಿಕೊಂಡರು ಹಾಗೂ ಪಂಚನಾಮೆಯನ್ನು ಸಂಜೆ 05-45 ರಿಂದ 06-45 ರವರೆಗೆ

ಜರುಗಿಸಿ, ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರತಿಸಿದ್ದು, ಅದನ್ನು ಈಗಾಗಲೇ ನಿಪಿ–20 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–20(ಡಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಸಮಯದಲ್ಲಿ ಜಪ್ತುಪಡಿಸಿಕೊಂಡ ಮೊಬೈಲ್‌ಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು–22 ರಿಂದ 25 ಎಂದು ಗುರುತಿಸಲಾಗಿರುತ್ತದೆ.

6. ದಿಃ 18–02–2014 ರಂದು ಸುಮಾರು ಬೆಳಿಗ್ಗೆ 08–00 ಗಂಟೆಗೆ ನಾನು ಮನೆಯಲ್ಲಿದ್ದಾಗ, ವೇಲು ಹಾಗೂ ಆತನ ಮಕ್ಕಳನ್ನು ಕೊಲೆ ಮಾಡಿದ ಆರೋಪಿಯನ್ನು ಹಿಡಿದಿರುತ್ತಾರೆ ಎಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿದ್ದರು. ವಿಷಯ ತಿಳಿದ ನಂತರ ನಾನು ಹಾಗೂ ನನ್ನ ಗಂಡ ಮತ್ತು ರಾಜೀವ ನಗರದ ಜನರೆಲ್ಲಾ ಸೇರಿ ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಅಲ್ಲಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ತೋರಿಸಿ, ಈತನೇ ವೇಲು ಹಾಗೂ ಆತನ ಮಕ್ಕಳನ್ನು ಕೊಲೆ ಮಾಡಿದ ಹಾಗೂ ಆತನ ಹೆಂಡತಿಯಾದ ಜಾನಕಿಯ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ ವ್ಯಕ್ತಿಯಾಗಿರುತ್ತಾನೆ ಎಂದು ತೋರಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

7. ಪೊಲೀಸ್ ಠಾಣೆಯಲ್ಲಿ "ಆರೋಪಿಯು ಮೃತ ವೇಲು ರವರ ಮನೆಯಿಂದ ರೂ.45,000/– ಹಣವನ್ನು ಕಳುವು ಮಾಡಿದ್ದು, ಅದರಲ್ಲಿ ರೂ.37,000/– ಹಣವನ್ನು ಆರೋಪಿಯು ಪುನಃ ಮೃತ ವೇಲು ರವರ ಮನೆಯ ಒಳಗೆ ತಂದು ಇಡುವಾಗ, ವೇಲು ಅದನ್ನು ನೋಡಿ, ಆರೋಪಿಗೆ ಉಳಿದ ಹಣವನ್ನು ತಂದು ಕೊಡು, ಇಲ್ಲವಾದರೆ ನಿನ್ನ ವಿರುದ್ಧ ಪೊಲೀಸ್ ಠಾಣೆಗೆ ದೂರನ್ನು ನೀಡುತ್ತೇನೆ ಎಂದು ಹೇಳಿದ್ದರಿಂದ, ಆರೋಪಿಯು ಹೆದರಿ ವೇಲುವನ್ನು ಕೊಲೆ ಮಾಡುವ ಉದ್ದೇಶದಿಂದ, ದಿಃ 14–02–2014 ರಂದು ವೇಲು ರವರಿಗೆ ಹಣ ಕೊಡುತ್ತೇನೆಂದು ಅವರ ಮನೆಯ ಹತ್ತಿರ ಇರುವ ಕಾಡಿನ ಬಳಿ ಕರೆದಿದ್ದು, ಆಗ ಆತ ತನ್ನ ಮಗನೊಂದಿಗೆ ಆರೋಪಿ ಹೇಳಿದ ಸ್ಥಳಕ್ಕೆ ಹೋದಾಗ, ಆರೋಪಿಯು ಕತ್ತಿಯಿಂದ ವೇಲುವಿಗೆ ಕಡಿದು, ಕೊಲೆ ಮಾಡಿದ್ದು, ಆಗ ಅದನ್ನು ನೋಡಿದ ಆತನ ಮಗ ಸತ್ಯ ನಾರಾಯಣ ಮನೆಯ ಕಡೆಗೆ ಓಡಿ ಬರುತ್ತಿರುವಾಗ, ಆರೋಪಿಯು ಆತನಿಗೂ ಸಹ ಕತ್ತಿಯಿಂದ ಕಡಿದು, ಕೊಲೆ ಮಾಡಿರುತ್ತಾನೆ, ಆ ನಂತರ ಆರೋಪಿಯು ವೇಲುವಿನ ಮನೆಗೆ ಬಂದು, ಅಲ್ಲಿಯೂ ಸಹ

ಆತನ ಮಗಳಾದ ಅಶ್ವಿನಿಯನ್ನು ಕತ್ತಿಯಿಂದ ಕಡಿದು, ಕೊಲೆ ಮಾಡಿರುತ್ತಾನೆ ಹಾಗೂ ಆತನ ಹೆಂಡತಿಯಾದ ಜಾನಕಿಯ ಮೇಲೆ ಕತ್ತಿಯಿಂದ ಮಾರಣಾಂತಿಕ ಹಲ್ಲೆ ಮಾಡಿರುತ್ತಾನೆ" ಎಂದು ತಿಳಿದು ಬಂತು. ಈ ಬಗ್ಗೆ ನಾನು ಪೊಲೀಸರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

8. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಮೃತ ವೇಲು ರವರ ಮಕ್ಕಳು ಶಾಲೆ ಕಲೆಯುತ್ತಿದ್ದರು. ವೇಲು ರವರು ಕೇವಲ ಪಂಚರ್ ಅಂಗಡಿಯನ್ನು ಮಾತ್ರ ಇಟ್ಟುಕೊಂಡಿದ್ದು, ಬೇರೆ ಏನು ಕೆಲಸ ಮಾಡುತ್ತಿರಲಿಲ್ಲ. ಆತನ ಹೆಂಡತಿಯೂ ಸಹ ಏನು ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ಟೈಯರ್ ಪಂಚರ್ ಅಂಗಡಿಯಿಂದ ಹೆಚ್ಚಿನ ಆದಾಯ ಬರುವುದಿಲ್ಲ ಎಂದರೆ ಸರಿಯಲ್ಲ. ವೇಲು ರವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ ಎಂದರೆ ಸಾಕ್ಷಿಯು ಅವರ ಅನುಕೂಲಕ್ಕೆ ತಕ್ಕಂತೆ ಇದ್ದರು ಎಂದು ಹೇಳುತ್ತಾರೆ. ಅವರು ಜೀವನಕ್ಕಾಗಿ ಇತರರಿಂದ ಸಾಲವನ್ನು ಪಡೆದಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

9. ಅಶ್ವಿನಿ ಕೊಲೆಯಾದ ಹಾಗೂ ಜಾನಕಿಯ ಮೇಲೆ ಹಲ್ಲೆ ಮಾಡಿರುವ ವಿಚಾರವನ್ನು ಊರಿನ ಜನರು ಹೇಳಿರುತ್ತಾರೆ. ನಾನು ವೇಲು ರವರ ಮನೆಯ ಬಳಿ ಹೋಗುವ ಮೊದಲು ಅಲ್ಲಿ ಸೇರಿದ್ದ ಜನರ ಪೈಕಿ ಎಷ್ಟು ಜನರು ಈಗಾಗಲೇ ಮನೆಯ ಒಳಗೆ ಹೋಗಿದ್ದರು ಎಂದು ನಾನು ವಿಚಾರಿಸಿಲ್ಲ. ಚಾಸಾ-24 ಸುಜಾತಾ, ಚಾಸಾ-26 ಶಾಂತಾ, ಚಾಸಾ-27 ಕವಿತಾ ರವರು ನನಗೆ ಪರಿಚಯದವರು. ನಾನು ಅಲ್ಲಿಗೆ ಹೋದಾಗ ಸದರಿ ಮೂರೂ ಜನರು ಸಹ ಇದ್ದರು, ಆದರೆ ನಾನು ಅವರ ಬಳಿ ಏನು ಮಾತನಾಡಿರುವುದಿಲ್ಲ. ದಿಃ 15-02-2014 ರಂದು ಪೊಲೀಸರು ಅಶ್ವಿನಿಯ ಶವವನ್ನು ತೆಗೆದುಕೊಂಡು ಹೋದ ನಂತರ ವೇಲು ರವರ ಮನೆಗೆ ಬೀಗ ಹಾಕಿ, ಸದರಿ ಬೀಗದ ಚಾವಿಯನ್ನು ನನಗೆ ಕೊಟ್ಟಿದ್ದರು. ನಮ್ಮ ಮನೆಯಲ್ಲಿ ಒಟ್ಟು ಮೂರು ಜನರು ಇರುತ್ತೇವೆ.

10. ವೇಲು ಹಾಗೂ ಸತ್ಯ ನಾರಾಯಣ ಮೂರ್ತಿಯ ಶವವನ್ನು ನೋಡಲು ಹೋದಾಗ, ಅಲ್ಲಿ ಪೊಲೀಸರು ಹಾಗೂ ಸುಮಾರು ಜನರು ಇದ್ದರು. ಈ ಘಟನೆಯಾದ ನಂತರ ನಾನು ಪೊಲೀಸ್ ಠಾಣೆಗೆ 2-3 ಬಾರಿ ಹೋಗಿರುತ್ತೇನೆ. ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಎಷ್ಟು ಸಹಿಗಳನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ನನಗೆ ಈಗ ನೆನಪಿಲ್ಲ. ನಿಪಿ-20 ಪಂಚನಾಮೆಯನ್ನು ಬರೆದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಸದರಿ ಪಂಚನಾಮೆಗೆ ನಾನು

ಹಾಗೂ ಚಾಸಾ-10, 11 ರವರು ಸಹಿ ಮಾಡಿರುತ್ತೇವೆ. ನಿಪಿ-20 ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿದಿಯಾ? ಎಂದರೆ ಸಾಕ್ಷಿಯು ಪೊಲೀಸರು ಓದಿ ಹೇಳಿದ ನಂತರ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-20 ಪಂಚನಾಮೆಯನ್ನು ಪೊಲೀಸರು ಪೊಲೀಸ್ ಠಾಣೆಯಲ್ಲಿ ಬರೆದು, ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ-20 ಪಂಚನಾಮೆಯ ಸಮಯದಲ್ಲಿ ಯಾವುದೇ ಮೊಬೈಲ್ ಗಳನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಮನೆಯನ್ನು ಪರಿಶೀಲಿಸಿದಾಗ ಮನೆಯ ಕಪಾಟಿನಲ್ಲಿ ಮೇಲೆ ಹೇಳಿದ ಯಾವುದೇ ವಸ್ತುಗಳನ್ನು ಇರಲಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು-22 ರಿಂದ 25 ಮೊಬೈಲ್ ಗಳನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕದ್ರಾ ಪೊಲೀಸ್ ಠಾಣೆಗೆ ಹೋದಾಗ, ಪೊಲೀಸರು ಆರೋಪಿಯನ್ನು ಕರೆದುಕೊಂಡು ಬಂದಿದು, ಅಲ್ಲಿ ನಾನು ಆರೋಪಿಯನ್ನು ನೋಡಿರುತ್ತೇನೆ ಹಾಗೂ ಆತನೇ ವೇಲು ಹಾಗೂ ಆತನ ಮಕ್ಕಳನ್ನು ಕೊಲೆ ಮಾಡಿರುತ್ತಾನೆ ಎಂದು ವಿಷಯ ತಿಳಿದು ಬಂತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ